CAREERINDIA

**Code No. 16**

Total No. of Questions : 61 ] [ Total No. of Printed Pages : 4

**June/July, 2009**

# OPTIONAL KANNADA

Time : 3 Hours 15 Minutes ] [ Max. Marks : 100

***ಸೂಚನೆ :*** i) ಪ್ರಶ್ನೆಗಳ ಸಂಖ್ಯೆಗಳನ್ನು ಉತ್ತರ ಪತ್ರಿಕೆಯ ಎಡಭಾಗದಲ್ಲಿ ಬರೆಯಿರಿ.

ii) ಪ್ರತಿ ವಿಭಾಗದಲ್ಲಿರುವ ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸಿ.

## ಭಾಗ – I

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ : 7 × 1 = 7

1) ನಂದನವನದಲ್ಲಿದ್ದ ಮರಗಳು ಯಾವುವು ?

2) ಸಾಮವೇದಿಗಳು ಶಿಷ್ಯರೊಂದಿಗೆ ಅರಣ್ಯಕ್ಕೆ ಬಂದ ಕಾರಣವೇನು ?

3) ರಥ ಹತ್ತುವಾಗ ಹೋಗಿ ಬರುವೆನೆಂದು ಅರ್ಜುನ ಯಾರಿಗೆ ಹೇಳಿದನು ?

4) ನಾಡು ಯಾವಾಗ ಕೆಡುತ್ತದೆ ?

5) ಭರತೇಶನ ರಾಣಿಯರು ಉಪ್ಪರಿಗೆಯನ್ನೇರಿದ ಬಗೆ ಹೇಗೆ ?

6) ದೇವೇಂದ್ರ ಏತಕ್ಕಾಗಿ ಊರಿಗೆ ಹೊರಟಿದ್ದ ?

7) ಇಮ್ಮಡಿ ತಿಮ್ಮರಾಜ ಒಡೆಯನು ತಾನಾಗಿ ಬಯಸಿ ಪಡೆದ ಹೊಸ ಬಿರುದು ಯಾವುದು ?

II. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಮೂರಕ್ಕೆ** ಹತ್ತರಿಂದ ಹದಿನೈದು ಪದಗಳಲ್ಲಿ ಉತ್ತರಿಸಿ :3 × 2 = 6

8) ಖಾಂಡವ ವನದಲ್ಲಿದ್ದ ಯಾವ ಯಾವ ಪ್ರಾಣಿಗಳು ನಾಶವಾದವು ?

9) 'ಮನುಷ್ಯ ಶರೀರ'ದ ಧರ್ಮವನ್ನು ಅರ್ಜುನ ಹೇಗೆ ಹೇಳಿದ್ದಾನೆ ?

10) ತೃಣವೇ ಪರ್ವತವಾಗುವುದು ಎಂದರೇನು ?

11) ಗುರುವಿನ ಬಗ್ಗೆ ಸರ್ವಜ್ಞನ ಅಭಿಪ್ರಾಯವೇನು ?

12) ಆಸ್ಥಾನದ ಗಾಯಕಿಯರು ಯಾವ ರೀತಿ ಹಾಡಿದರು ?

III. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : 2 × 3 = 6

13) ಪಂಪ ಬಣ್ಣಿಸಿರುವ ನಂದನವನದ ಚೆಲುವು ಎಂತಹುದು ?

[ Turn over

www.careerindia.com

CAREERINDIA



14) ಶಿವನ ಸ್ವಾಗತಕ್ಕೆ ಸಾಮವೇದಿಗಳು ಹೇಗೆ ಸಿದ್ಧತೆ ನಡೆಸಿದರು ?

15) ಅರ್ಜುನ-ಮಾತಲಿಯರ ಸಂವಾದದ ಆಶಯವನ್ನು ತಿಳಿಸಿ.

16) ದೇವಲೋಕದ ಜನರಿಗೆ ಭೂಲೋಕದ ಜನರ ಬಗೆಗೆ ಇರುವ ಭಾವನೆಯೇನು ?

IV. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : $2 \times 5 = 10$

17) ಖಾಂಡವ ವನದ ವನ್ಯ ಸಂಪತ್ತನ್ನು ವರ್ಣಿಸಿ.

18) ಸಾಮವೇದಿಗಳ ಪಾಂಡಿತ್ಯ ಮತ್ತು ಪ್ರಭಾವಗಳನ್ನು ಕವಿ ಹೇಗೆ ವರ್ಣಿಸಿದ್ದಾನೆ ?

19) ಶ್ವಪಚದೇವರು ಶಿವನನ್ನು ಅರ್ಚಿಸುತ್ತಿದ್ದ ಬಗೆ ಯಾವುದು ?

20) ಅರ್ಜುನನ ವ್ಯಕ್ತಿತ್ವವನ್ನು ಕುಮಾರವ್ಯಾಸನು ಹೇಗೆ ಚಿತ್ರಿಸಿದ್ದಾನೆ ?

V. ಕೆಳಗಿನ ಪದ್ಯಗಳಲ್ಲಿ **ಎರಡರ** ಸಂದರ್ಭ ಸೂಚಿಸಿ ಮಹತ್ವವನ್ನು ತಿಳಿಸಿ : $2 \times 3 = 6$

21) ಕೊಡಬೇಕುತ್ತಮನಾದವಂಗೆ ಮಗಳಂ ಸತ್ಪಾತ್ರಕಂ ದಾನಮಂ ।
ಬಿಡಬೇಕೈ ಧನ ಲೋಭ ಬಂಧು ಜನರೊಳ್ ದುಷ್ಪಾತ್ರರೊಳ್ ಗೋಷ್ಠಿಯಂ ॥
ಇಡಬೇಕೀಶ್ವರನಲ್ಲಿ ಭಕ್ತಿರಸಮಂ ವಿಶ್ವಾಸಮಂ ಸ್ವಾಮಿಯೊಳ್ ।
ಇಡಬೇಕಿದ್ದುಣಬೇಕೆಲೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥

22) ಏನಾದಡೇನಯ್ಯ ತಾನಾಗದನ್ನಕ್ಕ
ತಾನಾಗಿ ತನ್ನನರಿದವನು । ಲೋಕದಲಿ
ಏನಾದಡೇನು ಸರ್ವಜ್ಞ.

23) ರಾಣಿಯರೆಲ್ಲ ಸಿಂಗರಿಸಿ ಲೀಲೆಯೊಳು ಕೈ
ಗಾಣಿಕೆಗಳ ಕೈವಿಡಿದು
ಪ್ರಾಣನಾಥನ ಕಾಣಲುಪ್ಪರಿಗೆಯನು ಬಿ
ನ್ನಾಣ ದಿಂದಡರಿದರಾಗ.

VI. ಕೆಳಗಿನ ಸಾಲುಗಳಲ್ಲಿ **ಎರಡರ** ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : $2 \times 2 = 4$

24) ಆಱುಂ ಋತುಗಳ ಚೆಲ್ವಂ ಕಾಣಲಾದುದಾ ನಂದನದೊಳ್.

25) ಸ್ನೈಪಿನೊಳಲ್ಲದೆ ಕೂಡಿ ಬರ್ಕುಮೆ.

26) ಕಾಮವುಂಟೇ ಮರಕ್ಕೆ, ಕ್ರೋಧವುಂಟೇ ಲತೆಗೆ.

27) ಇದು ಫಲಿಸಿದುದು ವಿಧಿ.

## ಭಾಗ – II

VII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : $2 \times 5 = 10$

28) 'ದಿವಸ'ದ ಸಮಾರಂಭದಲ್ಲಿ ಸಾವಿನ ಮನೆಯಲ್ಲಿ ಎಂತಹ ಸಡಗರವಿತ್ತು ?

29) 'ಗಿಲ್' ಯಾರು ? ದೇವೇಂದ್ರನಿಗೂ ಅವನಿಗೂ ಇದ್ದ ಸಂಬಂಧ ಎಂತಹುದು ? ವಿವರಿಸಿ.

30) ದೇವೇಂದ್ರನ ತಂದೆಯ ಸಾವಿನ ವಿವರಗಳನ್ನು ತಿಳಿಸಿ.

www.careerindia.com

CAREERINDIA



VIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧ ಬರೆಯಿರಿ : $1 \times 10 = 10$

31) ದೇವೇಂದ್ರ ಊರಿಗೆ ಹೊರಡುವ ಸಮಯದಲ್ಲಿ ದಾರಿಯಲ್ಲಿ ಎದುರಾದ ಮಳೆಯಿಂದ ಒದಗಿದ ಅನಾನುಕೂಲತೆಗಳನ್ನು ಪರಿಚಯಿಸಿ.

32) ಅರಾಜಕತೆಯಿಂದ ಅಸ್ತವ್ಯಸ್ತವಾಗಿದ್ದ ಮನೆತನವನ್ನು ದೇವೇಂದ್ರನ ತಾಯಿ ಸರಿಪಡಿಸಿದ ಬಗೆಯನ್ನು ವಿವರಿಸಿ.

## ಭಾಗ – III

IX. ಕೆಳಗಿನ ಸಾಲುಗಳಲ್ಲಿ ಯಾವುದಾದರೂ **ಎರಡರ** ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : $2 \times 2 = 4$

33) ಅಲ್ಲಿರುವ ನಾಯ್ಬೆಕ್ಕುಗಳೂ, ಹಾವು-ಹಲ್ಲಿಗಳೂ, ಹುಳ-ಹುಪ್ಪಟೆಗಳೂ ಶೂರರೇಯಂತೆ !

34) ಅದು ಓಬೀರಾಯನ ಕಾಲದ ಚರಿತ್ರೆಯಣ್ಣಾ !

35) ಮಹಾಸ್ವಾಮಿ, ನಾನು ಹುಟ್ಟಿದ್ದು ಸಾರ್ಥಕವಾಯ್ತು.

X. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : $2 \times 3 = 6$

36) ಮಾದೇವಮ್ಮಣ್ಣಿ ಕೆರಳಲು ಕಾರಣವೇನು ?

37) ನಂಜಶೆಟ್ಟಿ ಮಾದೇವಮ್ಮಣ್ಣಿಯ ಕ್ಷಮೆಯನ್ನು ಹೇಗೆ ಕೋರುತ್ತಾನೆ ?

38) 'ಅಂತೆಂಬರ ಗಂಡ' ಒಬ್ಬರೇ ಎಂಬುದನ್ನು ನಂಜಶೆಟ್ಟಿ ಹೇಗೆ ಹೇಳಿದನು ?

XI. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧವನ್ನು ಬರೆಯಿರಿ : $1 \times 10 = 10$

39) ಮಹಿಶೂರ ಪ್ರಜೆಗಳ ರಾಜಭಕ್ತಿ ನಾಟಕದಲ್ಲಿ ಹೇಗೆ ವ್ಯಕ್ತವಾಗಿದೆ ?

40) ಸಂಸರು ವರ್ಣಿಸಿದ ಮೈಸೂರಿನ ಮಹಾರಾಜ ಇಮ್ಮಡಿ ತಿಮ್ಮರಾಜ ಒಡೆಯರ ವ್ಯಕ್ತಿತ್ವವನ್ನು ಚಿತ್ರಿಸಿ.

## ಭಾಗ – IV

XII. ಕೆಳಗಿನ ಪದಗಳಲ್ಲಿ ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ : $2 \times 2 = 4$

41) ಆರು ಋತುಗಳು

42) ಪಂಚ-ಮಹಾಪಾತಕಗಳು

43) ತ್ರಿಪದಿ

XIII. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ **ನಾಲ್ಕರ** ಅರ್ಥ ತಿಳಿಸಿ : $4 \times \frac{1}{2} = 2$

44) ಕದಳಿ

45) ಅನಲ

46) ಖಗ

47) ರಿಪು

48) ನೇಸರ

49) ನಭ



www.careerindia.com

CAREERINDIA



XIV. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ **ಮೂರು** ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ : $3 \times 1 = 3$

50) ಕುಸುಮ

51) ಅಗ್ನಿ

52) ನೆಲ

53) ಚಂದ್ರ

54) ಆಕಾಶ

XV. ಕೆಳಗಿನ ನುಡಿಗಟ್ಟುಗಳಲ್ಲಿ **ಎರಡನ್ನು** ಬಳಸಿ ವಾಕ್ಯಗಳನ್ನು ರಚಿಸಿ : $2 \times 1 = 2$

55) ಓಬೀರಾಯನ ಕಾಲ

56) ಕಾಲಿಗೆ ಬುದ್ಧಿ ಹೇಳು

57) ನಾಚಿ ನೀರಾಗು

58) ವೇದವಾಕ್ಯ

## ಭಾಗ – V

XVI. ಕೆಳಗಿನ **ಎರಡು** ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ : $2 \times 5 = 10$

59) ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ :

ಕೊಳಗಳ ಮರಗಳ ಲತೆಗಳ
ಫಳಪ್ರಸೂನಂಗಳೊದವಿನೊಳ್ ಪಕ್ಷಿಗಣಂ
ಗಳ ಪುದುವಿನೊಳಾಱುಂ ಋತು
ಗಳ ಚೆಲ್ವಂ ಕಾಣಲಾದುದಾ ನಂದನದೊಳ್ ॥

60) ಈ ಕೆಳಗಿನ ಗದ್ಯಭಾಗವನ್ನು ಹೊಸಗನ್ನಡಕ್ಕೆ ಅನುವಾದಿಸಿ :

ಇತ್ತ ಮಣಮಂದ ಪುತ್ತೂರಿಂದೊರ್ವಂ ಪರಿತಂದು ಮೆಯ್ಯಿಕ್ಕಿ ದೇವ ಇಂದೀಗಳೊರ್ವ ವೃದ್ಧ ಮಾಹೇಶ್ವರಂ ಬಂದು ಚಪ್ಪರಮಂ ಮುಱಿದು, ತೋರಣಮಂ ಪಱಿದು, ವೇದಿಕೆಯಂ ಕೆಡಹಿ ಬಾಯ್ಗೆ ಬಂದುದನೆಂದು ಕಯ್ಗೆ ಬಂದುದಂ ಮಾಡಿದಂ.

61) ಕೆಳಗೆ ಸೂಚಿಸಿರುವ ಯಾವುದಾದರೂ ಒಂದು ವಸ್ತುವಿನ ಬಗ್ಗೆ ಸ್ವಂತ ಕತೆ / ಕವಿತೆಯನ್ನು ರಚಿಸಿ :

ಅ) ಕನಸು

ಆ) ಮಳೆ

www.careerindia.com